ಇಂದು ದಿ**: 23.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯ ಇರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ **2** ರಿಂದ **7** ನೇ ಪ್ರತಿವಾದಿಗಳ ಪರಃ ಶ್ರೀ ಎನ್ ಜಿ ವಕೀಲರರಿಂದ

ದಿಃ 07.08.1989 ರ ನೊಂದಣಿ ಆಗದೆ ಇರುವ ಮೂಲ ದಾನ ಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾನ ಪತ್ರವು ಕಡ್ಡಾಯವಾಗಿ ನೊಂದಣಿ ಆಗಲೇಬೇಕಾದ ದಾಖಲೆ ಆದ ಕಾರಣ, ಸದರಿ ದಾಖಲೆಯನ್ನು ನಿಶಾನೆ ಎಂದು ಗುರುತಿಸಿರುವುದಿಲ್ಲ.

ಪಾಟೀ ಸವಾಲು **1** ನೇ ಪ್ರತಿವಾದಿಯ ಪರಃ ಶ್ರೀ ಕೆ ಎಂ ವಕೀಲರಿಂದ

ದಾವಾ ಆಸ್ತಿಯನ್ನು ನಮ್ಮ ತಂದೆ 70-80 ವರ್ಷದ ಹಿಂದೆ ನಾಗೇಶಪ್ಪ ಇವರಿಂದ ಖರೀದಿಗೆ ತೆಗೆದುಕೊಂಡಿದ್ದಾರೆ. ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದ. ನಮ್ಮ ತಂದೆಗೆ ಕೃಷಿಯನ್ನು ಹೊರತುಪಡಿಸಿ ಬೇರೆ ಆದಾಯದ ಮೂಲ ಇರಲಿಲ್ಲ. ನಮ್ಮ ತಂದೆ ಕೃಷಿ ಯಿಂದ ಬಂದ ಆದಾಯದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ. ಅಂದಿನಿಂದ ನಮ್ಮ ತಂದೆ ಅನುಭವಿಸುತ್ತಿದ್ದ. ನಮ್ಮ ತಂದೆ ಜೀವಂತ ಇರುವವರೆಗೂ ನಮ್ಮ ತಂದೆ, ನಾವು ಅಕ್ಕತಂಗಿಯರು, ಅಣ್ಣತಮ್ಮಂದಿರು ಒಟ್ಟು ಕುಟುಂಬದ ಆಸ್ತಿಯಾಗಿ ಅನುಭವಿಸಿರುತ್ತೇವೆ ಎನ್ನುವುದು ನಿಜ. 1 ನೇ ಪ್ರತಿವಾದಿ ನನ್ನ ತಮ್ಮ. 1 ನೇ ಪ್ರತಿವಾದಿ ಪಾಲು ವಿಭಾಗವನ್ನು ಕೋರಿ ನಮ್ಮ ಅಣ್ಣತಮ್ಮಂದಿರ ಮತ್ತು ಅಕ್ಕತಂಗಿಯರ ವಿರುದ್ದ ಇದೇ ನ್ಯಾಯಾಲಯದಲ್ಲಿ ಮೂಲ ದಾವೆ ನಂ. 33/2017 ನ್ನು ಸಲ್ಲಿಸಿದ್ದ ಎನ್ನುವುದು ನಿಜ. ಸದರಿ ದಾವೆಯಲ್ಲಿ ನಾನು ನಮ್ಮ ವಕೀಲರ ಮೂಲಕ ಹಾಜರಾಗಿ ಕೇಸನ್ನು ನಡೆಸಿರುತ್ತೇನೆ ಎನ್ನುವುದು ನಿಜ. ಸದರಿ ದಾವೆಯಲ್ಲಿ ಈ ದಾವಾ ಆಸ್ತಿಯ ಸೇರ್ಪಡೆ ಆಗಿತ್ತು ಎನ್ನುವುದು ನಿಜ. ಸದರಿ ದಾವೆ ದಿಃ 06.10.2023 ರಂದು ಡಿಕ್ರಿಯಾಗಿ, ಈ ದಾವಾ ಆಸ್ತಿಯಲ್ಲಿಯು 1 ನೇ ಪ್ರತಿವಾದಿಗೆ ಭಾಗಬರಬೇಕು ಎಂದು ಆದೇಶವಾಗಿತ್ತು ಎನ್ನುವುದು ನಿಜ. ಸದರಿ ಆದೇಶದ ವಿರುದ್ದ ಮೇಲ್ಮನವಿಯನ್ನು ನಾನು ಸಲ್ಲಿಸಿಲ್ಲ ನನ್ನ ತಮ್ಮ ಸಲ್ಲಿಸಿರುತ್ತಾನೆ. ನನ್ನ ತಂದೆ ನನಗೆ ಯಾವುದೇ ರೀತಿ ದಾನ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ವ್ಯವಸಾಯದಿಂದ ಬಂದ ಆದಾಯದಿಂದ ಈ ದಾವಾ ಆಸ್ತಿಯನ್ನು ಖರೀದಿಸಿದ್ದರಿಂದ, ನಮ್ಮ ತಂದೆಗೆ ದಾವಾ ಆಸ್ತಿಯನ್ನು ದಾನ ಪತ್ರದ ಮೂಲಕ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಎಲ್ಲಾ ಪ್ರತಿವಾದಿಗಳಿಗೆ ಹಕ್ಕು ಇದ್ದು, ನನ್ನೊಬ್ಬಳಿಗೆ ಮಾತ್ರ ಸಂಪೂರ್ಣ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯನ್ನು ನಾವೆಲ್ಲ ಪ್ರತಿವಾದಿಗಳು ಜಂಟಿಯಾಗಿ ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಹಾಗೂ ದಾನ ಪತ್ರದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನೊಬ್ಬಳಿಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಇಲ್ಲದೆ

ಇದ್ದರು ಸಹ ನಮ್ಮ ತಂದೆ ದಾನ ಪತ್ರ ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ವಾದಿಗಳ ಪರಃ ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.